Ex. 105/ 2017
ಪಿ. ಡಬ್ಲ್ಯೂ - **01**

**ದಿನಾಂಕಃ 14.06.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಸಿ ಕೆ ಎಮ್ ವಕೀಲರಿಂದಃ**

ನಾನು ಮತ್ತು ತೀರ್ಪು ಋಣಿಗಳು ಅನ್ಯೋನ್ಯವಾಗಿಲ್ಲ. ನಮ್ಮ ಹಾಗೂ ತೀರ್ಪು ಋಣಿಗಳು ಮಧ್ಯ ಜಮೀನಿನ ವಿಚಾರವಾಗಿ **2016** ಮೇ ತಿಂಗಳಿನಿಂದ ವೈಶಮ್ಯ ಉಂಟಾಗಿತ್ತು. ಅಂದಾಜು **2016** ಮೇ ತಿಂಗಳಿನಲ್ಲಿ ತೀರ್ಪು ಋಣಿಗಳು ಪ್ರಪ್ರಥಮ ಬಾರಿಗೆ ಜಮೀನಿನ ಸಲುವಾಗಿ ಕಿರುಕುಳ ಕೊಟ್ಟಿರುತ್ತಾರೆ ಆದರೆ ನಿಖರವಾದ ದಿನಾಂಕವನ್ನು ಹೇಳಲು ಬರುವುದಿಲ್ಲ, ಸುಮಾರು ಬೆಳಿಗ್ಗೆ 10 ರಿಂದ 11, 12 ಗಂಟೆ ಸಮಯದಲ್ಲಿ ಕಿರುಕುಳ ನೀಡಿರುತ್ತಾರೆ. ಜವರೇಗೌಡ ಹಾಗೂ ಶಿವೇಗೌಡರವರುಗಳು ಬಂದು ಜಗಳವನ್ನು ಬಿಡಿಸಿರುತ್ತಾರೆ. ತೀರ್ಪು ಋಣಿಗಳು ಕಿರುಕುಳ ಕೊಟ್ಟ ಬಗ್ಗೆ ನಾನು ಬೆಟ್ಟದಪುರ ಪೋಲೀಸ್ ಠಾಣೆಯಲ್ಲಿ ಪಿರ್ಯಾದಿ ನೀಡಿರುತ್ತೇನೆ. ಅಂದಾಜು **2016** ಮೇ ತಿಂಗಳಿನಲ್ಲಿ ತೀರ್ಪು ಋಣಿಗಳು ವಿರುದ್ಧ ಪಿರ್ಯಾದಿಯನ್ನು ನೀಡಿರುತ್ತೇನೆ ಆದರೆ ನಿಖರವಾದ ದಿನಾಂಕವನ್ನು ಹೇಳಲು ಬರುವುದಿಲ್ಲ. ಸದರಿ ಪಿರ್ಯಾದಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೆ ತೊಂದರೆ ಇಲ್ಲ.

ಜವರೇಗೌಡ ಹಾಗೂ ಶಿವೇಗೌಡರವರು ಕಿರುಕುಳ ಕೊಟ್ಟ ಸಂದರ್ಭದಲ್ಲಿ ಪ್ರಸ್ತುತರಿದ್ದರು. ಸದರಿ ಪಿರ್ಯಾದಿ ಮೇಲೆ ಪೋಲೀಸರು ಕಾನೂನಿನ ಕ್ರಮವನ್ನು ಜರುಗಿರುತ್ತಾರೆ. ಸಾಕ್ಷಿ ಮುಂದುವರೆದು ತೀರ್ಪು ಋಣಿಗಳನ್ನು ಕರೆದು ಸದರಿ ವಿಷಯವು ಸಿವಿಲ್ ನ್ಯಾಯಾಲಯದಲ್ಲಿ ಇತ್ಯರ್ಥ ಮಾಡಿಕೊಳ್ಳ ಬೇಕು ಎಂದು ಹೇಳಿರುತ್ತಾರೆ. ಸದರಿ ವಿಷಯವಾಗಿ ನಾನು ನ್ಯಾಯಾಲಯದಲ್ಲಿ ಪ್ರತ್ಯೇಕ ಪಿರ್ಯಾದಿಯನ್ನು ಸಲ್ಲಿಸಿರುತ್ತೇನೆ. ಆಗ ತೀರ್ಪು ಋಣಿಗಳು ನ್ಯಾಯಾಲಯದ ಮುಂದೆ ಹಾಜರಾಗಿರುವುದಿಲ್ಲ. ಸದರಿ ಪಿರ್ಯಾದಿಯಲ್ಲಿನ ತೀರ್ಪಿನ ತಿಳುವಳಿಕೆ ನನಗೆ ಇದೆ. ಆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೆ.

**2016** ವರ್ಷದಲ್ಲಿ ನಾನು ನ್ಯಾಯಲಯದ ಸಿವಿಲ್ ದಾವೆಯನ್ನು ಹೂಡಿರುತ್ತೇನೆ. ಸದರಿ ದಾವೆಯಲ್ಲಿ ಪ್ರಸ್ತುತ ಪ್ರಕರಣದ ತೀರ್ಪು ಋಣಿಗಳು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. **2016** ರ ಡಿಸೆಂಬರ್ ತಿಂಗಳಿನಲ್ಲಿ ಸದರಿ ದಾವೆಯ ತೀರ್ಪು ಬಂದಿರುತ್ತದೆ, ನಿಖರವಾದ ದಿನಾಂಕವನ್ನು ಹೇಳಲು ಬರುವುದಿಲ್ಲ. ಮೇಲ್ಕಂಡ ಸಿವಿಲ್ ದಾವೆಯು ಜಾಲ್ತಿಯಲ್ಲಿದ್ದಾಗ ತೀರ್ಪು ಋಣಿಗಳು ಯಾವ ದಿನಾಂಕದಂದು ಬಂದು ಕಿರುಕುಳ ಕೊಟ್ಟಿರುತ್ತಾರೆ ಎಂದು ನಿಖರವಾಗಿ ದಿನಾಂಕವನ್ನು ಹೇಳಲು ಬರುವುದಿಲ್ಲ. ಸದರಿ ಸಂದರ್ಭಗಳಲ್ಲಿ ನಾನು ಯಾವುದೇ ಪಿರ್ಯಾದಿಯನ್ನು ಪುನಃ ನೀಡಿರುವುದಿಲ್ಲ.

ಮೇಲ್ಕಂಡ ಸಿವಿಲ್ ದಾವೆಯಲ್ಲಿ ತೀರ್ಪು ಆದ ನಂತರ ನಮ್ಮ ವಕೀಲರ ಮೂಲಕ ತೀರ್ಪು ಋಣಿಗಳಿಗೆ ತೀರ್ಪಿನ ಬಗ್ಗೆ ಯಾವುದೇ ತಿಳುವತಿಕೆ ಪತ್ರವನ್ನು ನೀಡಿರುವುದಿಲ್ಲ. ಮೇಲ್ಕಂಡ ಸಿವಿಲ್ ದಾವೆಯು ಇತ್ಯರ್ಥ ವಾದ ನಂತರ ತೀರ್ಪು ಋಣಿಗಳು **ದಿನಾಂಕ 19-03-2017** ರಂದು ಬಂದು ಕಿರುಕುಳ ಕೊಟ್ಟಿರುತ್ತಾರೆ. ಆ ಸಂದರ್ಭದಲ್ಲಿ ನಮ್ಮ ಹಾಗೂ ತೀರ್ಪು ಋಣಿಗಳು ಮಧ್ಯ ಜಮೀನಿನ ಬೆಳೆ ನಾಶ ಮಾಡುವ ವಿಷಯವಾಗಿ ಗಲಾಟೆಯಗಿರುತ್ತದೆ. ಸದರಿ ಗಲಾಟೆಯು ಸುಮಾರು ಬೆಳಿಗ್ಗೆ 9 ರಿಂದ 10 ಗಂಟೆಯವರೆಗೆ ಆಗಿರುತ್ತದೆ. ಸದರಿ ಸಂದರ್ಭದಲ್ಲಿ ನಾನು ತೀರ್ಪು ಋಣಿಗಳಿಗೆ ನ್ಯಾಯಾಲಯದಿಂದ ಪಡೆದ ತೀರ್ಪಿನ ಪ್ರತಿಯನ್ನು ತೋರಿಸಿರುತ್ತೇನೆ. ಸ್ವಾಮಿಗೌಡ , ರವಿಗೌಡ ಮತ್ತು ಕಮಲಮ್ಮ ಹಾಗೂ ಇನ್ನಿತರೇ ವ್ಯಕ್ತಿಗಳು ಗಲಾಟೆಗೆ ಸೇರಿದ್ದರು. ನಮ್ಮ ಜಮೀನಿನ ಬೆಳೆಯನ್ನು ನಾಶ ಮಾಡಲೇ ಬೇಕೆಂದು ವೈರತ್ವ ಬರಲು ಕಾರಣ ನನಗೆ ಗೊತ್ತಿಲ್ಲ.

ಗಲಾಟೆಯದ ಸಂದರ್ಭದಲ್ಲಿ ಶಿವೇಗೌಡ ಹಾಗೂ ಜವರೇಗೌಡರು ಉಪಸ್ಥಿತರಿದ್ದರು. ಹಾಗೂ ಅವರೇ ಜಗಳವನ್ನು ಬಿಡಿಸಿರುತ್ತಾರೆ. **ದಿನಾಂಕಃ19-03-2017** ರಂದು ಸುಮಾರು ಮಧ್ಯಾಹ್ನ 12 ಗಂಟೆ ನಾನು ಪೋಲೀಸ್ ಠಾಣೆಗೆ ಪಿರ್ಯಾದಿಯನ್ನು ನೀಡಿರುತ್ತೇನೆ. ಆ ಸಂದರ್ಭದಲ್ಲಿ ಪೋಲೀಸ್ನವರಿಗೆ ನ್ಯಾಯಾಲಯದ ತೀರ್ಪಿನ ಪ್ರತಿಯನ್ನು ನೀಡಿರುತ್ತೇನೆ. ಹಾಗೂ ಪೋಲೀಸ್ರವರು ಕಾನೂನು ಕ್ರಮವನ್ನು ಜರುಗಿಸಿರುತ್ತಾರೆ. ಸದರಿ ಪಿರ್ಯಾದಿಗೆ ಯಾವುದೇ ಪ್ರಥಮ ವರ್ತಮಾನ ವರದಿಯನ್ನು ದಾಖಲಿಕೊಂಡಿರುವುದಿಲ್ಲ. ಪೋಲೀಸರು ಗಲಾಟೆಯು ಸಿವಿಲ್ ವ್ಯಾಜ್ಯಕ್ಕೆ ಸಂಬಂಧಿಸಿದ್ದು, ಸಂಬಂದಪಟ್ಟ ನ್ಯಾಯಾಲಯದಿಂದ ಆದೇಶವನ್ನು ಪಡೆದುಕೊಂಡು ಬರುವಂತೆ ಸೂಚಿಸಿದ್ದರು. **ದಿನಾಂಕಃ 20-03-2017** ರಂದು ಮುಂಜಾನೆ ತೀರ್ಪು ಋಣಿಗಳನ್ನು ಠಾಣೆಗೆ ಬರಮಾಡಿಕೊಂಡಿರುತ್ತಾರೆ. 10 ಗಂಟೆಯಿಂದ 12 ಗಂಟೆ ಸುಮಾರು ಸ್ವಾಮೀಗೌಡ, ರವಿಗೌಡ ಹಾಗೂ ಕಮಲಮ್ಮ ರವರುಗಳು ಠಾಣೆಗೆ ಬಂದಿರುತ್ತಾರೆ. ಅದೇ ಸಂದರ್ಭದಲ್ಲಿ ಗಲಾಟೆಯು ಸಿವಿಲ್ ವ್ಯಾಜ್ಯಕ್ಕೆ ಸಂಬಂಧಿಸಿದ್ದು, ಸಂಬಂದಪಟ್ಟ ನ್ಯಾಯಾಲಯದಿಂದ ಆದೇಶವನ್ನು ಪಡೆದುಕೊಂಡು ಬರುವಂತೆ ಸೂಚಿಸಿದ್ದರಾ ? ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿದಿರುತ್ತಾರೆ.

ನಾನು **ದಿನಾಂಕಃ 19-3-2017** ರಂದು ಆದ ಗಲಾಟೆಯ ವಿಚಾರವಾಗಿ, ಅದೇ ದಿನ ಪೋಲೀಸ್ ಠಾಣೆಯಲ್ಲಿ ಪಿರ್ಯಾದಿಯನ್ನು ನೀಡಿರುವ ಬಗ್ಗೆ ಹಾಗೂ **ದಿನಾಂಕಃ 20-3-2017** ರಂದು ಪೋಲೀಸರು ತೀರ್ಪು ಋಣಿಗಳನ್ನು ಠಾಣೆಗೆ ಬರ ಮಾಡಿಕೊಂಡ ವಿಚಾರವಾಗಿ ಮತ್ತು ಪೋಲೀಸರು ಸಿವಿಲ್ ನ್ಯಾಯಾಲಯದಿಂದ ಆದೇಶವನ್ನು ಪಡೆದುಕೊಂಡು ಬರುವಂತೆ ಸೂಚಿಸಿದ್ದ ವಿಚಾರದ ಬಗ್ಗೆ ನನ್ನ ವಕೀಲರಿಗೆ ನಾನು ತಿಳಿಸಿರುತ್ತೇನೆ. ಮೇಲ್ಕಂಡ ವಿಷಯವನ್ನು ಸದರಿ ಜಾರಿ ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ ತಿಳಿಸಿರುತ್ತೇನೆ. ಪೋಲೀಸ್ ಠಾಣೆಯಲ್ಲಿ ನೀಡಿದ ಪಿರ್ಯಾದಿಯನ್ನು ನಾನೇ ಬೇರೆಯವರಿಗೆ ಹೇಳಿ ಕೈಬರಹದಲ್ಲಿ ಬರೆಸಿರುತ್ತೇನೆ. ನನಗೆ ಕನ್ನಡ ಓದಲು ಹಾಗೂ ಬರೆಯಲು ಬರುವುದಿಲ್ಲ. ಪೋಲೀಸರ ಸೂಚನೆಯ ಮೇರೆಗೆ ನಾನು ಪ್ರಸ್ತುತ ಜಾರಿ ಅರ್ಜಿಯನ್ನು ಹಾಕಿರುತ್ತೇನೆ. ಗಲಾಟೆಯ ವಿಚಾರವಾಗಿ ಪ್ರಸ್ತುತ ಜಾರಿ ಅರ್ಜಿಯನ್ನು ಸಲ್ಲಿಸಿರುತ್ತೇವೆ. **ದಿನಾಂಕಃ 27-07-2017** ಪ್ರಮಾಣ ಪತ್ರದಲ್ಲಿ ಬರೆದ ಅಂಶ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಗಲಾಟೆಯ ವಿಚಾರವಾಗಿ ಪ್ರಸ್ತುತ ಜಾರಿ ಅರ್ಜಿಯನ್ನು ಸಲ್ಲಿಸಿರುತ್ತೇವೆ. ನನ್ನ ಮುಖ್ಯ ವಿಚಾರಣೆಗೆ ಬದಲಾಗಿ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಯಾವ ಅಂಶಗಳಿವೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಗಲಾಟೆಯ ವಿಚಾರವಾಗಿ ಪ್ರಸ್ತುತ ಜಾರಿ ಅರ್ಜಿಯನ್ನು ಸಲ್ಲಿಸಿರುತ್ತೇವೆ.

ಸದರಿ ಪ್ರಮಾಣ ಪತ್ರದಲ್ಲಿ **ದಿನಾಂಕಃ 19-3-17** ರಂದು ತೀರ್ಪು ಋಣಿಗಳು ಬಂದು ತಂಟೆ ತಕರಾರು ಮಾಡಿರುವ ವಿಚಾರವನ್ನು ತಿಳಿಸಲು ಯಾವುದೇ ತೊಂದರೆ ಇರುವುದಿಲ್ಲ. ಹಾಗೂ ಅದೇ ದಿನ ಪೋಲೀಸ್ ಠಾಣೆಯಲ್ಲಿ ಪಿರ್ಯಾದಿಯನ್ನು ನೀಡಿರುವ ವಿಚಾರ ಹಾಗೂ **ದಿನಾಂಕಃ 20-3-17** ರಂದು ಪೋಲೀಸರು ತೀರ್ಪು ಋಣಿಗಳನ್ನು ಬರಮಾಡಿಕೊಂಡು ಸಿವಿಲ್ ನ್ಯಾಯಾಲಯದಿಂದ ಆದೇಶವನ್ನು ಪಡೆಯುವಂತೆ ಸೂಚಿಸಿದ ವಿಚಾರವನ್ನು ಬರೆಯಲು ಯಾವುದೇ ತೊಂದರೆ ಇರುವುದಿಲ್ಲ. ದಾವಾ ಸ್ವತ್ತುಗಳ ಅಕ್ಕ ಪಕ್ಕದಲ್ಲಿ ತೀರ್ಪು ಋಣಿಯ ಜಮೀನುಗಳು ಇವೆ. ನಾನು ಏಪ್ರಿಲ್ **2016** ರಲ್ಲಿ ತೀರ್ಪು ಋಣಿಗಳಿಗೆ ಅವರ ಜಮೀನುಗಳನ್ನು ನನಗೆ ಮಾರಾಟ ಮಾಡುವಂತೆ ಕೇಳಿ ಕೊಂಡಿದ್ದೇ ಎಂದರೆ ಸರಿಯಲ್ಲ. ನಾನು ಮಾಡಿದ ಪ್ರಸ್ತಾಪನೆಯನ್ನು ಅವರು ತಿರಸ್ಕರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕಾರಣಕ್ಕಾಗಿ ಅವರಿಗೆ ಭಯವನ್ನುಂಟುಮಾಡಲು **ಅಸಲು ದಾವೆ ಸಂಖ್ಯೆಃ 165/2016** ರಲ್ಲಿ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಯಾವುದೇ ವ್ಯಾಜ್ಯ ಕಾರಣ

ಇಲ್ಲದಿದ್ದರೂ ದಾವೆಯನ್ನು ಹೂಡಿರುತ್ತೇವೆ  ಎಂದರೆ ಸರಿಯಲ್ಲ. **ದಿನಾಂಕಃ 19-3-17** ರಂದು ತೀರ್ಪು ಋಣಿಗಳು ದಾವೆಯ ಸ್ವತ್ತುಗಳ ಬಳಿ ಬಂದು ತಂಟೆ ತಕರಾರು ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ  ಸರಿಯಲ್ಲ. ಹಾಗೂ ಅದೇ ದಿನ ಪೋಲೀಸ್ ಠಾಣೆಯಲ್ಲಿ ಪಿರ್ಯಾದಿಯನ್ನು ನೀಡಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಹಾಗೂ **ದಿನಾಂಕಃ 20-3-17** ರಂದು ಪೋಲೀಸರು ತೀರ್ಪು ಋಣಿಗಳನ್ನು ಬರಮಾಡಿಕೊಂಡು ಸಿವಿಲ್ ನ್ಯಾಯಾಲಯದಿಂದ ಆದೇಶವನ್ನು ಪಡೆಯುವಂತೆ ಸೂಚಿಸಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು ಈ ಜಾರಿಯ ಅರ್ಜಿಯ ಸಲುವಾಗಿ **ನಿ.ಪಿ.5 ರಿಂದ 13** ರನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ತೀರ್ಪು ಋಣಿಗಳು ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿದ್ದಾರೆ ಎಂದು ಸುಳ್ಳು ಜಾರಿ ಅರ್ಜಿಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ತೀರ್ಪು ಋಣಿಗಳಿಗೆ ಭಯವುಂಟು ಮಾಡಲು ಸುಳ್ಳು ಅಂಶಗಳನ್ನು ನಮೂದಿಸಿ ಜಾರಿ ಅರ್ಜಿಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ವಾದಿ ಪರ ವಿಚಾರಣೆ ಸಮಯ ಕೋರಲಾಯಿತು, ಸಮಯ ನೀಡಲಾಯಿತು.

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ. ಹಾಗೂ ಪ್ರ.ವ.ನ್ಯಾ.ದಂ.**
**ಪಿರಿಯಾಪಟ್ಟಣ.**